

ಅಧ್ಯಾತ್ಮವಾಗಿ ಬಳಸಿಕೊಳ್ಳುವುದು ಅಕ್ರಮವೆಂದೇ ನಾನು ಭಾವಿಸುತ್ತೇನೆ. ಸ್ವತಃ ಬೇಂದ್ರೆಯವರಿಗೆ ಅಧ್ಯಾತ್ಮವೇ ಹೆಚ್ಚಿನದಾಗಿ ಕಂಡಿರಬಹುದು. ಅದು ಅಪ್ರಸ್ತುತ. ಏಕೆಂದರೆ ಅವರ ಕಾವ್ಯವು ಹಾಗೆ ಹೇಳುವುದಿಲ್ಲ.

ಹೀಗೊಂದು ಸುತ್ತಾಟವನ್ನು ಮುಗಿಸಿಕೊಂಡು ನಾನು 'ಸಖೀಗೀತ'ಕ್ಕೆ ಮರಳುತ್ತೇನೆ. ನಾನು ಆಗಲೇ ಹೇಳಿದ ನಿಷ್ಠುರವಾದ, ವಸ್ತುನಿಷ್ಠವಾದ ಎಚ್ಚರದಿಂದ ಬೇಂದ್ರೆಯವರು ದಾಂಪತ್ಯವೆನ್ನುವ ಅತ್ಯಂತ ಆತ್ಮೀಯವಾದ ವೈಯಕ್ತಿಕವಾದ ವಿದ್ಯಮಾನವನ್ನು ಶೋಧಿಸುತ್ತಾರೆ. ಇಲ್ಲಿ ಮತ್ತೆ ಪದ್ಯದ ಆಚೆಗಿರುವ ಬೇಂದ್ರೆಯವರ ಮಾತನ್ನೇ ಉದ್ಧರಿಸುತ್ತಿದ್ದೇನೆ. ಅವರ ಪ್ರಕಾರ, ಅವರ ಕಾಲದ ಸಂಸ್ಕಾರವಂತ ಕುಟುಂಬಗಳಲ್ಲಿ ವಧುವು ವಿಧಿ ತಂದ